ನಾವು ಒಪ್ಪಿಕೊಂಡಿರುವ ಬಟ್ಟೆಗಳನ್ನು ಸರಬರಾಜು ಮಾಡಬೇಕೆನ್ನುವ ಉದ್ದೇಶದಿಂದ ಕೆಲವು ಅಧಿಕಾರಿಗಳನ್ನು ಇಲ್ಲಿಗೆ ಕರೆಸಿಕೊಂಡಿದ್ದೇವೆ ನಿಜ. ಮೂರು ತಿಂಗಳಲ್ಲಿ ಇದನ್ನು ಕೊಡಬೇಕಾಗಿರುವುದರಿಂದ, ನಮಗೆ ವೇಳೆ ಬಹಳ ಕಡಿಮೆ ಇರುವುದರಿಂದ ಅವರ ಜೊತೆ ಸಮಾಲೋಚನೆ ಮಾಡಿ ಸೆಂಟರ್‌ಗಳಿಗೆ ಬಟ್ಟೆಗಳನ್ನು ಕಳಿಸುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ. ಪರ್ಚೇಸ್ ವಿಭಾಗವನ್ನು ಹುಬ್ಬಳ್ಳಿಯಲ್ಲಿ ನಾವು ಇಡುತ್ತೇವೆ. ಮೂರನೇ ಪ್ರಶ್ನೆ ಮಹದೇವ ಟೆಕ್ಸ್‌ಟೈಲ್ ಮಿಲ್ಲಿನ ಬಗ್ಗೆ ನೀವು ಪರಿಹಾರ ಕೊಡುವುದನ್ನು ಏನು ಮಾಡಿದ್ದೀರಿ ಎಂದು ಹೇಳಿದ್ದೀರಿ, ಮಹದೇವ ಟೆಕ್ಸ್‌ಟೈಲ್ ಮಿಲ್ ಮತ್ತೆ ಪುನರಾರಂಭ ಮಾಡುವ ಪರಿಸ್ಥಿತಿಯಲ್ಲಿ ಇಲ್ಲ. ಅಲ್ಲಿಯ ನೌಕರರಿಗೆ ಪರಿಹಾರ ಕೊಡಬೇಕೆಂದು ಅವರು ನಮಗೆ ಮನವಿ ಕೊಟ್ಟಿದ್ದಾರೆ. ತಾವು ಸಹ ಸರ್ಕಾರದ ಗಮನ ಸೆಳೆದಿದ್ದೀರಿ. ಅದಕ್ಕೆ ಮೂರು ಕೋಟಿ ರೂಪಾಯಿಗಳಷ್ಟು ತಾತ್ಕಾಲಿಕ ಪರಿಹಾರ ಕೊಡಬೇಕಾಗಿದೆ. ಆ ಪರಿಹಾರ ಹಣವನ್ನು ಸರ್ಕಾರ ಅವರ ಆಸ್ತಿ ಮೇಲೆ ವಿಲೇ ಆಗುವುದಕ್ಕೆ ಮುಂಚೆ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿಕೊಟ್ಟಿದ್ದಾರೆ, ಹಣಕಾಸು ಇಲಾಖೆಯಲ್ಲಿ ಆ ಪ್ರಸ್ತಾವನೆ ಪರಿಶೀಲನೆಯಲ್ಲಿದೆ. ಅದು ಬಂದ ಕೂಡಲೆ ಕ್ಯಾಬಿನೆಟ್ ಮುಂದೆ ತೆಗೆದುಕೊಂಡು ಬಂದು ಮಂಜೂರಾತಿ ಮಾಡಿಸಿಕೊಂಡು ಪರಿಹಾರ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಹದೇವ ಜವಳಿ ಗಿರಣಿ ಬಗ್ಗೆ ತಕ್ಷಣ ಕ್ರಮ ತೆಗೆದುಕೊಳ್ಳಿ 15 ಜನ ಸತ್ತಿದ್ದಾರೆ.

ಶ್ರೀ ಎಂ. ಮಹದೇವ್ : ನಮ್ಮ ಇಲಾಖೆಯಿಂದ ಆ ಪ್ರಸ್ತಾವನತಎನ್ನು ಹಣಕಾಸು ಇಲಾಖೆಗೆ ಕಳುಹಿಸಿಕೊಟ್ಟಿದ್ದೇವೆ. ಅವರು ಪರಿಶೀಲನೆ ಮಾಡುತ್ತಿದ್ದಾರೆ ಪರಿಶೀಲನೆ ಮಾಡಿ ಆದಷ್ಟು ಜಾಗ್ರತೆಯಾಗಿ ಅದಕ್ಕೆ ಮಂಜೂರಾತಿ ಒಪ್ಪಿಗೆ ಕೊಡುವುದಕ್ಕಾಗಿ ಕ್ಯಾಬಿನೆಟ್ ಮುಂದೆ ತರುವಂತೆ ಹೇಳಿದ್ದೇವೆ, ಆದಷ್ಟು ಜಾಗ್ರತೆ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಹೇಳುತ್ತೇವೆ.

ಔರಾದ ನಗರಕ್ಕೆ ನೀರು ಸರಬರಾಜು ಮಾಡುವ ಯೋಜನೆ

105 (1163) ಶ್ರೀ ಗುಂಡಪ್ಪ ವಕೀಲ್ (ಔರಾದ್) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 20 ಸಾವಿರ ಜನಸಂಖ್ಯೆ ಇರುವ ಔರಾದ್ ನಗರಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ನಗರದಿಂದ ಕೇವಲ 6.0 ಕಿ.ಮೀ. ದೂರದಲ್ಲಿರುವ ''ತೆಂಗಂಪೂರ'' ಸಣ್ಣ ನೀರಾವರಿ ಕೆರೆ ಕೆಳಗೆ ಬಾವಿ ತೋಡಿ ನೀರು ಸರಬರಾಜು ಮಾಡುವ ಯೋಜನೆ ಯಾವ ಹಂತದಲ್ಲಿದೆ?

ಇ) ಯೋಜನೆಯನ್ನು ಈ ವರ್ಷದ ಆಯವ್ಯಯದಲ್ಲಿ ಅಳವಡಿಸಲಾಗಿದೆಯೇ ಇಲ್ಲದಿದ್ದರೆ ಕಾರಣವೇನು?

ಶ್ರೀ ಎಸ್.ಎಂ.ಕೃಷ್ಣ (ಮುಖ್ಯ ಮಂತ್ರಿಗಳು) :

ಅ) ಬಂದಿದೆ

ಆ) ಪರಿಶೀಲನೆಯಲ್ಲಿದೆ

ಇ) ಅನುಮೋದನೆ ನೀಡಿದ ನಂತಹ ಆಯವ್ಯಯದಲ್ಲಿ ಅಳವಡಿಸಲಾಗುವುದು.

ಶ್ರೀ ಗುಂಡಪ್ಪ ವಕೀಲ್ : ಸನ್ಮಾನ್ಯ ಅಧ್ಯಕ್ಷರೆ, ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದಾಗಿನಿಂದ ಇಲ್ಲಿಯವರೆಗೆ ಔರಾದ್ ನಗರಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ನಾವು ಮಾಡಿರತಕ್ಕಂತಹ ಪಾಪ ಆದರೂ ಏನು ನಮ್ಮ ಕರ್ಮ ಏನು ಅದರ ಬಗ್ಗೆ ಆ ಸಚಿವರು ಹೇಳಬೇಕು. ಎಂಡನೇ ಮಾತು ಔರಾದ್ ನಗರದಿಂದ ಆರು ಕಿ.ಮೀ. ಮೇಲೆ ಸಣ್ಣ ನೀರಾವರಿ ಕೆರೆ ಇದೆ. ಬೇಕಾದಷ್ಟು ನೀರು ಇಲ್ಲಿದೆ. ಅಲ್ಲಿ ಬಾವಿ ತೋಡಿಸಿ ಔರಾದ್ ನಗರಕ್ಕೆ ನೀರು ಸರಬರಾಜು ಮಾಡಿಕೊಡಿ ಎಂದು ನಾವು 25 ವರ್ಷಗಳಿಂದ ಕೇಳುತ್ತಿದ್ದೇವೆ. ಕುಡಿಯುವದಕ್ಕೆ ನೀರು ಕೊಡಿ ಎಂದರೆ ನೀವು ಏಕೆ ಕೊಡುತ್ತಿಲ್ಲ? ಕೊಡುತ್ತೀರಾ ಅಥವ ಇಲ್ಲವೆ ಇದಗ ಬಗ್ಗೆ ನಿಖರವಾದ ಉತ್ತರ ಕೊಡಿ.

ಶ್ರೀ ಬಿ.ಜಿ. ಚಿಮ್ಮನಕಟ್ಟಿ : ಸನ್ಮಾನ್ಯ ಅಧ್ಯಕ್ಷರೆ, ಅದು ಹಿಂದೆ ಆದ ಪಾಪ ಪುಣ್ಯದ ಬಗ್ಗೆ, ಚರ್ಚೆ ಮಾಡುವ ಅವಶ್ಯಕತೆ ಇಲ್ಲ, ಅದು ಏಕೆ ಆಗಲಿಲ್ಲವೆಂದು ನಾವು ಪರಾಮರ್ಶಿಸುವುದು ಬೇಕಾಗಿಲ್ಲ. ಇಡೀ ಬೀದರ್ ಜಿಲ್ಲೆಯಲ್ಲಿ ಔರಾದ್ ಪಟ್ಟಣಕ್ಕೆ ಕುಡಿಯುವ ನೀರಿನ ಸಮಸ್ಯೆ ಇರುವುದು ಸರ್ಕಾರಕ್ಕೆ ಕೂಡ ಮನವರಿಕೆಯಾಗಿದೆ. ಸುಮಾರು 1974ರಲ್ಲಿ ಒಂದು ಸಣ್ಣ ಕುಡಿಯುವ ನೀರಿನ ಯೋಜನೆ ಮಾಡಿದ್ದರು. ಬೋರ್‌ವೆಲ್‌ಗಳ ಮೂಲಕ ಕುಡಿಯುವ ನೀರನ್ನು ಕೊಡಬೇಕೆಂದು ಮಾಡಿದ್ದರು. ಆ ಯೋಜನೆಯನ್ನು ಕೇಂದ್ರ ಸರ್ಕಾರಕ್ಕೂ ಕೂಡ ಕಳುಹಿಸಿಕೊಟ್ಟಿದ್ದರು. ಅದು ಓಪನ್ ವೆಲ್ ಸ್ಕೀಂ ಇರುವುದರಿಂದ ಕೇಂದ್ರ ಸರ್ಕಾರದವರು ಡಬ್ಲ್ಯು.ಎಸ್. ಪ್ರೋಗ್ರಾಂನಲ್ಲಿ ಇದನ್ನು ರೆಫ್ಯೂಸ್ ಮಾಡಿದ್ದಾರೆ. ಆದರೆ ನಾವು ಈಗ ಪೈಪ್ಡ್ ವಾಟರ್ ಸಪ್ಲೈ ಸ್ಕೀಮ್‌ನಲ್ಲಿ, ಈ ಯೋಜನೆಗೆ 2.66 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ. ಇದು 13,000 ಜನಸಂಖ್ಯೆ ಇರುವ ಸಣ್ಣ ಪಟ್ಟಣ. ಅದಕ್ಕೆ ಕೂಡ ಮುಂದಿನ ವರ್ಷ ಬಜೆಟ್‌ನಲ್ಲಿ ಯೋಜನೆ ಹಾಕಿಕೊಂಡು ಮಾಡುತ್ತೇವೆ. ಇದು ಬಹಳ ಅವಶ್ಯವೆಂದು ಸರ್ಕಾರಕ್ಕೆ ಮತ್ತು ನನಗೆ ಕೂಡ ಮನವರಿಕೆಯಾಗಿದೆ. ಯಾವುದೇ ರಿಸೋರ್ಸ್‌ಸ್ ಇಲ್ಲದ ಪಟ್ಟಣ, ಇದು. ಈ ಪಟ್ಟಣಕ್ಕೆ ಹೆಚ್ಚು ಆದ್ಯತೆ ಕೊಡಬೇಕೆಂದು ನನಗೆ ಮನವರಿಕೆಯಾಗಿದೆ. ಮುಂದಿನ ವರ್ಷದೊಳಗೆ ಇದಕ್ಕೆ ಆದ್ಯತೆ ನೀಡಿ ಈ ಯೋಜನೆಗೆ ಮಂಜೂರಾತಿಯನ್ನು ಕೊಟ್ಟು ಮುಗಿಸುವುದಕ್ಕೆ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇವೆ.

ಅಧ್ಯಕ್ಷರು : ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು.

<u>ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು</u>

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ದಿನಾಂಕ 8ನೇ ಮಾರ್ಚ್ 2001ರ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಎಳನೇ ಪಟ್ಟಿಯಲ್ಲಿನ ಲಿಖಿತ ಮೂಲಕ ಉತ್ತರಿಸುವ 75 ಪ್ರಶ್ನೆಗಳ ಪೈಕಿ 55 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.